# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-10 ಚಾಸಾ-42)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 11.07.2022

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಮಚಂದ್ರಪ್ಪ, |
| ತಂದೆಯ ಹೆಸರು | - | ನಾರಾಯಣಸ್ವಾಮಿ, |
| ವಯಸ್ಸು | - | 65 ವರ್ಷ, |
| ಉದ್ಯೋಗ | - | ಕೂಲಿ ಕೆಲಸ, |
| ವಾಸ | - | ವಿಶ್ವನಾಥಪುರ. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

1. ಈಗ ತೋರಿಸಲಾದ ಮೂರು ದಾಖಲೆಗಳ ಮೇಲೆ ನನ್ನ ಸಹಿ ಇದೆ. ಸದರಿ ಮೂರು ದಾಖಲೆಗಳಿಗೆ ಈಗ ಸುಮಾರು 12 ವರ್ಷಗಳ ಹಿಂದೆ ವಿಶ್ವನಾಥಪುರ ಬಸ್ ಸ್ಟಾಂಡ್ ಹತ್ತಿರ ಇದ್ದಾಗ ಪೋಲಿಸರು ಅವುಗಳಿಗೆ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಗೆ ತೋರಿಸಿದ ಮೂರು ದಾಖಲೆಗಳು ದಿಃ19.02.2010 ರಂದು ಮಾಡಿದ ಮಹಜರ್ ಗಳು ಇದ್ದು ಅವುಗಳನ್ನು ಕ್ರಮವಾಗಿ ನಿಪಿ-13 ರಿಂದ 15 ಎಂದು ಗುರ್ತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿದಾರರ ಸಹಿಗಳನ್ನು ನಿಪಿ-13(ಎ) ಯಿಂದ 15(ಎ) ಎಂದು ಗುರ್ತಿಸಲಾಯಿತು. ಚಾಸಾ-43 ಶಿವಪ್ಪ ಇವರ ಪರಿಚಯ ಇದೆ. ಚಾಸಾ-44 ರಾಮಾನುಜಮ್ ಇವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದಿರುವ ಈಗ ತೋರಿಸಿದ 2 ನೇ ಆರೋಪಿ ನಾಗೇಶ್ ಗೌಡ, 7 ನೇ ಆರೋಪಿ ಬೈರೇಗೌಡ ಮತ್ತು 10 ನೇ ಆರೋಪಿ ಮಂಜುನಾಥ ಇವರನ್ನು ನಾನು ನೋಡಿಲ್ಲ.

2. ಈಗ ತೋರಿಸಲಾದ ಎರಡು ದೊಣ್ಣೆಗಳು ಮತ್ತು ಒಂದು ಚೂರಿಯನ್ನು ನಾನು ನೋಡಿಲ್ಲ. ಸಾಕ್ಷಿಗೆ ತೋರಿಸಲಾದ ದೊಣ್ಣೆಗಳು ಮು.ಮಾ-5 ಮತ್ತು 6 ಇರುತ್ತವೆ. ಅವರಿಗೆ ತೋರಿಸಿದ ಚೂರಿ ಈಗಾಗಲೇ ಮು.ಮಾ-2 ಎಂದು ಗುರ್ತಿಸಲಾಗಿದೆ.

ಸದರಿ ಮು.ಮಾ-2, 5 ಮತ್ತು 6 ಇವುಗಳ ಮೇಲಿನ ಸಹಿ ಚೀಟಿಗಳಲ್ಲಿನ ಅವರ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಗಳನ್ನು ಮು.ಮಾ-2(ಎ), 5(ಎ) ಮತ್ತು 6(ಎ) ಎಂದು ಗುರ್ತಿಸಲಾಯಿತು. ಅವುಗಳಿಗೂ ಸಹ 12 ವರ್ಷಗಳ ಹಿಂದೆ ಬಸ್ ಸ್ಟ್ಯಾಂಡ್ ಹತ್ತಿರ ಸಹಿ ಮಾಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು : ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>

3. ನಾನು ಗೌಡ ಜಾತಿಗೆ ಸೇರಿದವನು ಎಂದರೆ ಸರಿ. 1ನೇ ಆರೋಪಿ ತಿಮ್ಮಯ್ಯ ಸಹ ಗೌಡ ಜಾತಿಯವರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಎಲ್ಲಾ ಆರೋಪಿತರ ಪರಿಚಯ ನನಗೆ ಇದೆ ಎಂದರೆ ಸರಿಯಲ್ಲ.

4. ದಿಃ19.02.2010ರಂದು ಬೆಳಗ್ಗೆ ಸುಮಾರು 09.30ಕ್ಕೆ ಪೋಲಿಸರು ನನ್ನನ್ನು ವಿಶ್ವನಾಥಪುರ ಪೋಲಿಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-43 ಮತ್ತು 44 ಇವರನ್ನು ಸಹ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಠಾಣೆಯಲ್ಲಿ ಡಿವೈಎಸ್ಪಿ ಅವರು ಸಹ ಇದ್ದರು ಎಂದರೆ ಸರಿಯಲ್ಲ. ಆಗ ಠಾಣೆಯಲ್ಲಿ 2, 7 ಮತ್ತು 10ನೇ ಆರೋಪಿ ಇವರು ಇದ್ದರು ಮತ್ತು ಅವರನ್ನು ಡಿವೈಎಸ್ಪಿರವರು ನನಗೆ ತೋರಿಸಿದರು ಎಂದರೆ ಸರಿಯಲ್ಲ. ಸದರಿ ಮೂರು ಜನ ಆರೋಪಿತರು ಅಪರಾಧದಲ್ಲಿ ಉಪಯೋಗಿಸಿದ ಆಯುಧಗಳನ್ನು ತೆಗೆದಿಟ್ಟಿದ್ದು ತಮ್ಮ ಜೊತೆ ಬಂದರೆ ಅವುಗಳನ್ನು ತೋರಿಸಿ ಹಾಜರುಪಡಿಸುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಅವರು ಹೇಳಿದ್ದರಿಂದ ನಾವು ಮತ್ತು ಆರೋಪಿತರು ಮತ್ತು ಪೋಲಿಸ್ ಸಿಬ್ಬಂದಿ ಜೀಪಿನಲ್ಲಿ ಹೊರಟೆವು ಎಂದರೆ ಸರಿಯಲ್ಲ.

5. ಮೊದಲು 7ನೇ ಆರೋಪಿ ನಮ್ಮನ್ನು ದೊಡ್ಡಬಳ್ಳಾಪುರ ದೇವನಹಳ್ಳಿ ರಸ್ತೆಯಲ್ಲಿರುವ ಆದಿನಾರಾಯಣ ಹೊಸಹಳ್ಳಿ ಬಳಿಯ ದೊಡ್ಡನಂಜಪ್ಪನವರ

ಜಮೀನಿನಲ್ಲಿರುವ ಕಾಡುಗಿಡಗಳ ಪೊದೆ ಹತ್ತಿರ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಆತ ಸದರಿ ಪೊದೆಯಿಂದ ನನಗೆ ತೋರಿಸಿದ ಮು.ಮಾ-5 ದೊಣ್ಣೆಯನ್ನು ತೆಗೆದು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೋಲಿಸರು ಅದನ್ನು ಅಮಾನತುಪಡಿಸಿಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಮಹಜರ್ ಅನ್ನು ಮಾಡಿದರು ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಬೆಳಗ್ಗೆ 11.15 ರಿಂದ 12.00 ಘಂಟೆ ಅವಧಿಯಲ್ಲಿ ನಿಪಿ-13 ರಂತೆ ಮಾಡಿ ಅಲ್ಲೇ ನನ್ನ ಮತ್ತು ಉಳಿದ ಸಾಕ್ಷಿದಾರರ ಸಹಿಗಳನ್ನು ಅದಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

6. ನಂತರ 10 ನೇ ಆರೋಪಿ ನಮ್ಮನ್ನು ನಿಪಿ-13 ಮಹಜರ್ ಮಾಡಿದ ಸ್ಥಳದಿಂದ ಸುಮಾರು 2-3 ಕಿಮೀ ದೂರದಲ್ಲಿರುವ ಶಿವಪುರ ಗ್ರಾಮದ ದೊಡ್ಡಬಳ್ಳಾಪುರ ದೇವನಹಳ್ಳಿ ಮುಖ್ಯ ರಸ್ತೆಯ ವಿಠಲ್ ದಾಸ್ ಶಾಲೆಯ ಎದುರಿನ ರಸ್ತೆಯ ದಕ್ಷಿಣ ಅಂಚಿನ ರೋಜಾ ಗಿಡಗಳ ಪೊದೆಯ ಹತ್ತಿರ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಸದರಿ ಗಿಡಗಳ ಪೊದೆಯಿಂದ ಸದರಿ ಆರೋಪಿಯು ನನಗೆ ತೋರಿಸಿದ ಮು.ಮಾ-6 ದೊಣ್ಣೆಯನ್ನು ತೆಗೆದು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೋಲಿಸರು ಅದನ್ನು ಅಮಾನತುಪಡಿಸಿಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಮಹಜರ್ ಅನ್ನು ಮಾಡಿದರು ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಮಧ್ಯಾಹ್ನ 12.45 ರಿಂದ 01.15 ಘಂಟೆಯವರೆಗೆ ಸ್ಥಳದಲ್ಲಿಯೇ ನಿಪಿ-14 ರಂತೆ ಮಾಡಿ ಅಲ್ಲೇ ನನ್ನ ಮತ್ತು ಉಳಿದ ಸಾಕ್ಷಿದಾರರ ಸಹಿಗಳನ್ನು ಅದಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

7. ನಂತರ 2 ನೇ ಆರೋಪಿ ನಮ್ಮನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ಹಮಾಮ್ ಗ್ರಾಮದ ನಾನಪ್ಪ ಇವರ ಜಮೀನಿನ ಪಕ್ಕದಲ್ಲಿರುವ ರೋಜಾ ಗಿಡಗಳ ಪೊದೆಯ ಹತ್ತಿರ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಸದರಿ ಗಿಡಗಳ ಪೊದೆಯಿಂದ ಸದರಿ ಆರೋಪಿಯು ನನಗೆ ತೋರಿಸಿದ ಮು.ಮಾ-2 ಚೂರಿಯನ್ನು ತೆಗೆದು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೋಲಿಸರು ಅದನ್ನು

ಅಮಾನತುಪಡಿಸಿಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಮಹಜರ್ ಅನ್ನು ಮಾಡಿದರು ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಮಧ್ಯಾಹ್ನ 01.45 ರಿಂದ 02.45 ಘಂಟೆಯವರೆಗೆ ಸ್ಥಳದಲ್ಲಿಯೇ ನಿಪಿ-15 ರಂತೆ ಮಾಡಿ ಅಲ್ಲೇ ನನ್ನ ಮತ್ತು ಉಳಿದ ಸಾಕ್ಷಿದಾರರ ಸಹಿಗಳನ್ನು ಅದಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಚೂರಿಯನ್ನು ನಾನು ನೋಡಿದಾಗ ಅದಕ್ಕೆ ಅಲ್ಲಲ್ಲಿ ರಕ್ತದ ಕಲೆಗಳು ಇದ್ದಿದ್ದು ಕಂಡುಬಂತು ಎಂದರೆ ಸರಿಯಲ್ಲ.

8. ಆರೋಪಿತರು ನನಗೆ ಬೇಕಾಗಿದ್ದರಿಂದ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎಲ್ಲಾ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು